


ವಧುವಿನ ಸೆರಗಿನಂತೆ ಕಾಣುವ ಬ್ರೈಡಲ್‌ವೇಲ್ ಫಾಲ್ಸ್

# ಯೋಸೆಮಿಟಿ

## ಜೀವವೈವಿಧ್ಯದ ವಿಸ್ಮಯ ತಾಣ



ಸೂರ್ಯನ ಕಿರಣಗಳು ಬಿದ್ದು ಕೆಂಪಾಗಿ ಪ್ರತಿಫಲಿಸುವ ಹಾರ್ಸ್‌ಟೇಲ್ ಫಾಲ್ಸ್

**ಕ್ಯಾಲಿಫೋರ್ನಿಯಾದ ಯೋಸೆಮಿಟಿ, ಜೀವವೈವಿಧ್ಯದ ಸುಂದರ ನೆಲ. ನದಿ ಸರೋವರಗಳು, ಕೊರಕಲು ಕಣಿವೆಗಳು, ಹೆಬ್ಬಂಡೆಗಳು, ಹೆಮ್ಮರಗಳಿಂದ ಆವೃತವಾದ ಪ್ರಕೃತಿದತ್ತ ವಿಸ್ಮಯ ತಾಣ.**

■ **ಗಣೇಶ ಭಟ್ಟ**

ಅಮೆರಿಕಕ್ಕೆ, ಅದರಲ್ಲೂ ಕ್ಯಾಲಿಫೋರ್ನಿಯಾಗೆ ಹೋಗಿದ್ದೆವು ಎಂದು ಯಾರಾದರೂ ಹೇಳಿದರೆ ಎದುರಿನಿಂದ ಬರಬಹುದಾದ ಸಾಮಾನ್ಯ ಪ್ರಶ್ನೆ 'ಯೋಸೆಮಿಟಿಗೆ ಹೋಗಿದ್ದೀರಾ?' ಎಂದು. ಯೋಸೆಮಿಟಿ ರಾಷ್ಟ್ರೀಯ ಉದ್ಯಾನ ವಿಶ್ವಪ್ರಸಿದ್ಧ. ಸುಮಾರು 7,59,620 ಎಕರೆ (3074 ಚ.ಕಿ.ಮೀ.) ಪ್ರದೇಶವನ್ನು ಒಳಗೊಂಡಿರುವ ಯೋಸೆಮಿಟಿಯು ಹರಿಯುವ ನದಿ, ಹುಲ್ಲುಗಾವಲು, ಜೌಗು ಪ್ರದೇಶ, ಭೀಕರ ಹೆಬ್ಬಂಡೆಗಳು, ಕೊರಕಲು ಕಣಿವೆ, ವನ್ಯಜೀವಿಗಳು, ನೂರಾರು ವರ್ಷಗಳಷ್ಟು ಹಳೆಯ ಹೆಮ್ಮರಗಳ ಕಾಡು, ನೂರಾರು ಕೆರೆ, ಸರೋವರ, ಹಿಮನದಿ ಎಲ್ಲವನ್ನೂ ಒಳಗೊಂಡ ಜೀವವೈವಿಧ್ಯದ ಕ್ಷೇತ್ರ.

1890ರಿಂದಲೇ ಸಂರಕ್ಷಿತ ರಾಷ್ಟ್ರೀಯ ಅರಣ್ಯವೆಂದು ಘೋಷಿತವಾಗಿ, 1984ರಿಂದ ವಿಶ್ವಪಾರಂಪರಿಕ ತಾಣವೆಂದು ಘೋಷಿಸಲ್ಪಟ್ಟಿದೆ. ಚಾರಣಿಗರು, ಬಂಡೆ ಏರುವ ಸಾಹಸಿಗಳು, ಚಿತ್ರ ಬರೆಯುವವರು, ಸಸ್ಯಶಾಸ್ತ್ರದ ಅಭ್ಯಾಸಿಗಳು ಎಲ್ಲರಿಗೂ ಪ್ರೀತಿಯ ತಾಣ.

ಸಿಯಾರಾ ನೇವಡಾ ಪರ್ವತ ಶ್ರೇಣಿಯ ಭಾಗವಾಗಿರುವ ಯೋಸೆಮಿಟಿ (Yosemite) ಸುಮಾರು ಒಂದು ಕೋಟಿ ವರ್ಷಗಳ ಹಿಂದೆ ಉಂಟಾದ ಭೂಮಿಯ ಒಳಪದರಗಳ ತಿಕ್ಕಾಟದಿಂದ ಮೇಲ್ಮುಖವಾಗಿ ಒತ್ತಲ್ಪಟ್ಟು ನಿರ್ಮಾಣಗೊಂಡವು ಎಂದು ಭೂಗರ್ಭಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಸುಮಾರು ಹತ್ತು ಲಕ್ಷ ವರ್ಷಗಳ ಹಿಂದೆ ಅಲ್ಲಿರುವ ಹಿಮನದಿಯ ನಿರ್ಮಾಣವಾಯಿತು ಎನ್ನುತ್ತಾರೆ.

1848ರಲ್ಲಿ ಕ್ಯಾಲಿಫೋರ್ನಿಯಾದ ಸಿಯೆರಾ ನೆವಡಾ ಪರ್ವತ ಶ್ರೇಣಿಗಳ ತಪ್ಪಲಿನಲ್ಲಿ ಚಿನ್ನದ ನಿಕ್ಷೇಪಕ್ಕೆ ಮುಗಿಬೀಳುವ ಉದ್ದೇಶದಿಂದ (ಕ್ಯಾಲಿಫೋರ್ನಿಯಾ ಗೋಲ್ಡ್ ರಶ್) ವಿದೇಶಿಯರು ಮುಖ್ಯವಾಗಿ ಯೂರೋಪಿಯನ್ನರು ಆ ಭಾಗಕ್ಕೆ ದೌಡಾಯಿಸಿದರು. ಅಂತೆಯೇ ಆ ದೇಶದ ಇತರ ಭಾಗಗಳಿಂದಲೂ ಅಲ್ಲಿಗೆ ಜನಪ್ರವಾಹವೇ ಹರಿಯಿತು. ಆಗ ದಾಳಿಕೋರ ವಸಾಹತುಗಾರರು ಹಾಗೂ ಮೂಲನಿವಾಸಿಗಳ ನಡುವೆ ಘರ್ಷಣೆಗಳು ಆರಂಭವಾದವು. ಅಹವನೀಚಿ